**ಸಾಕ್ಷಿಗೆ ದಿನಾಂಕ 25.09.2025 ರಂದು ಪ್ರಮಾಣ ವಚನ ನೀಡಲಾಯಿತು.**

**ಪಾಟೀಸವಾಲುಃ ಪ್ರತಿವಾದಿ ಪರ ಶ್ರೀ S.L.G ವಕೀಲರಿಂದ**

ನಾನು ವಿಧ್ಯಾಭ್ಯಾಸ ಮಾಡಿಲ್ಲ. ನಮ್ಮ ಗ್ರಾಮದಲ್ಲಿರುವ ಮನೆತನದಲ್ಲಿ ನಡೆದ ವ್ಯವಹಾರಗಳು ನನಗೆ ಗೊತ್ತಿರುತ್ತದೆ. 1 ನೇ ವಾದಿ ನನ್ನ ರಕ್ತ ಸಂಬಂಧಿ ಎಂದರೆ ಸರಿಯಲ್ಲ. ಸರ್ವೆ ನಂಬರ 15/1 ಕ್ಕೆ ಸಂಬಂಧಿಸಿದಂತೆ ದಾವೆ ಸಲ್ಲಿಸಿರುತ್ತಾರೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಜಮೀನಿನ ಸರ್ವೆ ನಂಬರ ಹೇಳಿ ಬರೆಸಿಲ್ಲ. ಯಾವ ದಿನಾಂಕದಂದು ಕ್ರಯ ಪತ್ರ ಬರೆದುಕೊಟ್ಟಿರುತ್ತಾರೆ ಎಂದು ನನಗೆ ನಿಖರವಾಗಿ ಗೊತ್ತಿಲ್ಲ 1976 ರಂದು ಬರೆದಿರುತ್ತಾರೆ. ಸದರಿ ಕ್ರಯ ಪತ್ರವನ್ನು ನಾನು ನೋಡಿಲ್ಲ ಹಾಗೂ ಸಾಕ್ಷಿದಾರನಾಗಿ ಸಹಿ ಮಾಡಿಲ್ಲ. ಕ್ರಯ ಪತ್ರವನ್ನು ಚಿನ್ನಸ್ವಾಮಿಚಾರಿರವರು ಬರೆದಿರುತ್ತಾರೆ. ದಾವಾ ಸ್ವತ್ತಿನಲ್ಲಿ ಚಿಕ್ಕಹೈದರವರು ಜೀವಿತಾವಧಿವರೆಗೂ ಸಹ ಸ್ವಾಧೀನದಲ್ಲಿದ್ದರು ಎಂದರೆ ಸರಿಯಲ್ಲ. ಸುಮಾರು 40-45 ವರ್ಷಗಳಿಂದಲೂ ವಾದಿಯವರು ದಾವಾ ಸ್ವತ್ತಿನಲ್ಲಿ ಸ್ವಾಧೀನದಲ್ಲಿದ್ದಾರೆ. ವಾದಿಯು ದಾವಾ ಸ್ವತ್ತಿನಲ್ಲಿ ತಿಪ್ಪೆ ಹಾಕಿಕೊಂಡು ಸ್ವಾಧೀನದಲ್ಲಿದ್ದಾರೆ ನಾನು ದಾಖಲೆ ನೋಡಿಲ್ಲ. ದಾವಾ ಸ್ವತ್ತಿನಲ್ಲಿ ವಾದಿಯವರು ಸ್ವಾಧೀನದಲ್ಲಿಲ್ಲ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಚೆಕ್ಕುಬಂಧಿ ಪೂರ್ವಕ್ಕೆಃಪ್ರತಿವಾದಿಯವರ ಉಳಿಕೆ ಜಮೀನು, ಉತ್ತರಕ್ಕೆಃರಾಜಣ್ಣರವರ ಜಮೀನು, ಪಶ್ಚಿಮಕ್ಕೆಃತಿಮ್ಮನಾಯಕರವರ ಜಮೀನು, ದಕ್ಷಿಣಕ್ಕೆಃಮರಿಕಾಳಯ್ಯರವರ ಜಮೀನು ರಂತೆ ಇರುತ್ತದೆ. ದಾವಾ ಸ್ವತ್ತಿನ ಅಕ್ಕಪಕ್ಕ ನನಗೆ ಜಮೀನು ಇರುವುದಿಲ್ಲ ಮನೆ ಇರುತ್ತದೆ. ಮೃತ 1 ನೇ ಪ್ರತಿವಾದಿ ವಾದಿಯ ತಂದೆ ರಂಗಚಾರಿರವರಿಗೆ ಎಂದಿಗೂ ಸಹ ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಕ್ರಯ ಪತ್ರ ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ವಾದಿಯವರಾಗಲಿ ಅವರ ತಂದೆಯವರಾಗಲಿ ಎಂದಿಗೂ ಸಹ ಸ್ವಾಧೀನದಲಿಲ್ಲರಲಿಲ್ಲ ಎಂದರೆ ಸರಿಯಲ್ಲ.

ದಾವಾ ಸ್ವತ್ತು ಒಂದೇ ಜಮೀನಾಗಿದ್ದು ಅದು ವ್ಯವಸಾಯದ ಜಮೀನು ಎಂದರೆ ಸರಿಯಲ್ಲ ಸಾಕ್ಷಿ ಸದರಿ ಜಮೀನಿನಲ್ಲಿ ತಿಪ್ಪೆ ಮತ್ತು ಮರಗಳು ಇದ್ದವು, ಜಮೀನಿನ ಸುತ್ತಲು

ಬೇಲಿ ಹಾಗೂ ತಿಪ್ಪೆ ಇರುತ್ತವೆ ಎಂದು ನುಡಿಯುತ್ತಾರೆ. ಜಮೀನಿನ ಪಶ್ಚಿಮ ದಿಕ್ಕಿಗೆ ಬೇಲಿ ಹಾಕಿರುತ್ತಾರೆ. ವಾದಿ ನನ್ನ ಸಂಬಂಧಕರಾಗಿದ್ದು ಅವರಿಗೆ ಸಹಾಯವಾಗಲೆಂದು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ಪ್ರತಿವಾದಿಯವರು ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ಹಿತ್ತಲು ಇಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.**

**ಓ.ಹೇ.ಕೇ.ಸರಿ ಇದೆ.**

**ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.**
**ನ್ಯಾಯಾಧೀಶರು, ಹುಣಸೂರು.**